ಸಾಕ್ಷಿಯನ್ನು ದಿಃ 07.06.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀಮತಿ ಎಂ ಎಂ ವಕೀಲರಿಂದಃ**

ದಾವಾ ಐಟಂ ನಂ.1 ರ ಆಸ್ತಿ ಕೊರಮಪ್ಪ ಇವರು ದಿಃ10.03.1967 ರಂದು ಪಲ್ಲೆಕಪ್ಪರವರಿಗೆ ಮರಣ ಶಾಸನ ಮೂಲಕ ಕೊಟ್ಟಿದ್ದರು ಅನ್ನುವುದು ಸುಳ್ಳು. ಸದರಿ 1 ನೇ ಐಟಂ ಆಸ್ತಿಯ ಮೇಲೆ ವಾದಿಗಳಿಗೆ ಮಾತ್ರ ಮಾಲೀಕತ್ವದ ಮತ್ತು ಸ್ವಾದೀನದ ಹಕ್ಕು ಮಾತ್ರ ಇರುತ್ತದೆ ಬೇರೆ ಯಾರಿಗೂ ಇರುವುದಿಲ್ಲ ಅನ್ನುವುದು ಸುಳ್ಳು. ಕೊರಮಪ್ಪನ ಹೆಂಡತಿ ಕರಿಯಮ್ಮಗೂ 1 ಐಟಂ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲ ಎನ್ನುವುದು ಸುಳ್ಳು. 1990-91 ರ ವರೆಗೆ 1 ಐಟಂ ಆಸ್ತಿಗಳು ಕೊರಮಪ್ಪನ ಹೆಸರಿನಲ್ಲಿತ್ತು ಆದರೆ ಒಂದೇ ದಿನದಲ್ಲಿ ಕೊಡಮಪ್ಪನ ಹೆಂಡತಿ ಮತ್ತು ಕೆ. ವೀರಪ್ಪ ಕಾನೂನು ಬಾಹಿರವಾಗಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಅನ್ನುವುದು ಸುಳ್ಳು. ಆ ರೀತಿ ಈಗ ನನಗೆ ತೋರಿಸುತ್ತಿರುವ ನಿಪಿ-10 ಮತ್ತು 13 ರಂತೆ ದಾವಾ 1 ಮತ್ತು 2 ನೇ ಆಸ್ತಿಯ ಖಾತೆ ಮಾಡಿಸಿಕೊಂಡಿದ್ದಾರೆ ಅನ್ನುವುದು ಸುಳ್ಳು. ದಾವಾ 1 ನೇ ಐಟಂ ಆಸ್ತಿಯ ಹಕ್ಕು ಬದಲಾವಣೆ ಮಾಡಿಸಿಕೊಳ್ಳುವ ಅಧಿಕಾರ ಕೇವಲ ಕೊರಮಪ್ಪನ ಹೆಂಡತಿ ಕರಿಯಮ್ಮ ಮತ್ತು ಕೆ. ವೀರಪ್ಪ ಇವರಿಗೆ ಇರಲಿಲ್ಲ ಅನ್ನುವುದು ಸರಿಯಲ್ಲ.

ದಾವಾ 1 ನೇ ಐಟಂ ಆಸ್ತಿಯು 1 ರಿಂದ 9 ನೇ ಪ್ರತಿವಾದಿಯರು 14 ಮತ್ತು 15 ನೇ ಪ್ರತಿವಾದಿಯರಿಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಅನ್ನುವುದು ಸುಳ್ಳು. ನಾವು 14 ಮತ್ತು 15 ನೇ ಪ್ರತಿವಾದಿಯರಿಗೆ ನಿಪಿ-3 ಮತ್ತು 4 ರಡಿಯಲ್ಲಿ ಬರೆದು ಕೊಟ್ಟಿರುವ 1 ನೇ ಐಟಂ ಆಸ್ತಿಯ ಕ್ರಯ ಪತ್ರಗಳು ಅನೂರ್ಜಿತ ಅನ್ನುವುದು ಸುಳ್ಳು . ನಿಡಿ-24 ರಲ್ಲಿ ಇರುವ ಜಮೀನು ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಳ್ಳುವ ಹಕ್ಕು ಇರಲಿಲ್ಲ ಅನ್ನುವುದು ಸರಿಯಲ್ಲ. ಸರ್ವೆ ನಂ.11/1 ಆಸ್ತಿಯ ಮೇಲೆ ಸಂಪೂರ್ಣ ಅಧಿಕಾರ ಕೇವಲ ವಾದಿಯರಿಗೆ ಮಾತ್ರ

ಇರುತ್ತದೆ ಅನ್ನುವುದು ಸುಳ್ಳು.

ನಿಪಿ-3 ಮತ್ತು 4 ರಂತೆ ಕ್ರಯ ಪತ್ರ ಆದ ನಂತರ ವಾದಿಯರು ನನ್ನ ಮತ್ತು 1 ರಿಂದ 9 ಮತ್ತು 14, 15 ನೇ ಪ್ರತಿವಾದಿಯರ ವಿರುದ್ದ ಹಿರಿಯೂರಿನ ತಾಲೂಕು ಕಛೇರಿಯಲ್ಲಿ ಆರ್ ಆರ್ ಟಿ ಪ್ರಕರಣ ಸಂಖ್ಯೆ39/2013-14 ಸಲ್ಲಿಸಿದ್ದರು ಅನ್ನುವುದು ನಿಜ. ಸದರಿ ಪ್ರಕರಣದಲ್ಲಿ ಈ ದಾವೆ ಇತ್ಯರ್ಥವಾಗುವವರೆಗೆ 1 ನೇ ಐಟಂ ಆಸ್ತಿಗೆ ಸಂಬಂಧಿಸಿದ ಖಾತೆ ಬದಲಾವಣೆ ಮಾಡಬಾರದು ಎಂದು ಹಿರಿಯೂರು ತಹಶೀಲ್ದಾರರು ಆದೇಶ ಮಾಡಿದ್ದರೂ ಸಹ 1 ರಿಂದ 9 ನೇ ಪ್ರತಿವಾದಿಯರು, 14 ಮತ್ತು 15 ನೇ ಪ್ರತಿವಾದಿಯರು ಸೇರಿಕೊಂಡು ಈಗ ನನಗೆ ತೋರಿಸುತ್ತಿರುವ ನಿಡಿ-24 ರಿಂದ 26 ಖಾತೆ ಬದಲಾವಣೆಯನ್ನು ಕಾನೂನು ಬಾಹಿರವಾಗಿ ಮಾಡಿಸಿಕೊಂಡಿದ್ದೇವೆ ಅನ್ನುವುದು ಸುಳ್ಳು.

ದಾವಾ ಐಟಂ ನಂ.2 ನೇ ಆಸ್ತಿ, ಸರ್ವೆ ನಂ.3 ರ 6 ಎಕರೆ 1 ಗುಂಟೆ ವಾದಿಯರು ಮತ್ತು 1 ರಿಂದ 13 ನೇ ಪ್ರತಿವಾದಿಗಳು ಜಂಟಿ ಸ್ವಾದೀನದಲ್ಲಿ ಇದ್ದರೂ ಸಹ ಕಾನೂನು ಬಾಹಿರವಾಗಿ ನಿಡಿ-22 ರಂತೆ 2015 ರಲ್ಲಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆ ಅನ್ನುವುದು ಸುಳ್ಳು. ಎರಡೂ ಆಸ್ತಿಗಳ ಖಾತೆ ಬದಲಾವಣೆ ಈ ದಾವೆ ಚಾಲ್ತಿಯಲ್ಲಿರುವಾಗಲೇ ಆಗಿರುತ್ತವೆ ಅನ್ನುವುದು ಸರಿಯಲ್ಲ.

ನಾವು ಪ್ರತ್ಯೇಕ ವಂಶವೃಕ್ಷವನ್ನು ಹಾಜರು ಮಾಡಿಲ್ಲ. ದಾವಾ 1 ನೇ ಐಟಂ ಆಸ್ತಿಯ ಮೇಲೆ ವಾದಿಯರಿಗೆ ಸಂಪೂರ್ಣ ಅಧಿಕಾರವಿದ್ದರೂ ಸಹ ನಾವು ಪ್ರತಿವಾದಿಗಳು ಆ ಸ್ವತ್ತಿಗೆ ಸಂಬಂಧಿಸಿದಂತೆ ಮರಣ ಶಾಸನ ಮತ್ತು ಇತರೆ ದಾಖಲೆಗಳನ್ನು ಸೃಷ್ಟಿ ಮಾಡಿಸಿರುತ್ತೇವೆ ಅನ್ನುವುದು ಸರಿಯಲ್ಲ. ದಾವಾ 2 ನೇ ಐಟಂ ಆಸ್ತಿಯ ಮೇಲೆ ವಾದಿಯರಿಗೆ 1/3 ಪಾಲಿನ ಹಕ್ಕು ಇದ್ದರೂ ಸಹ ನಾವು ಕಾನೂನು ಬಾಹಿರವಾಗಿ ಖಾತೆ ಬದಲಾಣೆ ಮಾಡಿಸಿಕೊಂಡಿದ್ದೇವೆ

ಅನ್ನುವುದು ಸುಳ್ಳು.

1ನೇ ಪ್ರತಿವಾದಿ ವೀರಪ್ಪ 2015 ರಲ್ಲಿ ಮೃತಪಟ್ಟಿರುತ್ತಾನೆ. 1 ನೇ ಪ್ರತಿವಾದಿ ಈ ದಾವೆಯಲ್ಲಿ ತನ್ನ ಪರವಾಗಿ ಲಿಖಿತ ಹೇಳಿಕೆ ಹಾಕಿದ್ದಾನೆ ಎಂದರೆ ನಿಜ. 1ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ನಾವು ವಿಚಾರಣೆಯಲ್ಲಿ ಹೇಳಿರುವಂತೆ 3 ಮರಣ ಶಾಸನಗಳ ಬಗ್ಗೆ ಹಾಗೂ 2 ಕ್ರಯ ಪತ್ರಗಳ ಕುರಿತು ಹೇಳಿಲ್ಲ ಅನ್ನುವುದು ಸರಿಯಲ್ಲ . ಈಗ ನನಗೆ ತೋರಿಸುತ್ತಿರುವ ನಿಡಿ-3 ರ ಮರಣ ಶಾಸನ ಕರಿಯಮ್ಮ ವೀರಪ್ಪನಿಗೆ ಬರೆದುಕೊಟ್ಟಿದ್ದಾಳೆ. ದಿಃ23.11.1982 ರಂದು ಕರಿಯಮ್ಮ ವೀರಪ್ಪನಿಗೆ ಮಾತ್ರ ನಿಡಿ-3 ಬರೆದುಕೊಟ್ಟಿದ್ದಾಳೆ. ಸದರಿ ದಾಖಲೆಯು ಕರಿಯಮ್ಮ ಸರ್ವೆ ನಂ.3, 6 ಎಕರೆ 1 ಗುಂಟೆ ಮತ್ತು ಸರ್ವೆ ನಂ.11/1 ರಲ್ಲಿ 7 ಎಕರೆ 35 ಗುಂಟೆ ಆಸ್ತಿಗಳನ್ನು ಬರೆದುಕೊಟ್ಟಿದ್ದಾಳೆ. ನಿಡಿ-3 ಕ್ಕೆ ನಿಂಗರೆಡ್ಡಿ , ಶಿವು, ರಾಜಶೇಖರಯ್ಯ ಮೂರು ಜನ ಸಾಕ್ಷಿದಾರರಾಗಿದ್ದಾರೆ. ನಿಡಿ-3 ಯಾರು ಬರೆದಿದ್ದಾರೆ ಅನ್ನುವುದು ನೆನಪಿಲ್ಲ. ಸಾಕ್ಷಿದಾರರನ್ನು ವಿಚಾರಣೆ ಮಾಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿದಾರರು ಆ ಮೂರು ಜನರು ಮರಣ ಹೊಂದಿರುತ್ತಾರೆ ಎಂದು ಹೇಳುತ್ತಾರೆ. ಆ ಮೂರು ಜನ ಸಾಕ್ಷಿದಾರರು ಮತ್ತು ಬರಹಗಾರನ ಹೆಂಡತಿ ಮಕ್ಕಳು ಇರಬಹುದು ಆದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಅವರ ಕುಟುಂಬಸ್ಥರ ಬಗ್ಗೆ ತಿಳಿದುಕೊಂಡು ಅವರನ್ನು ವಿಚಾರಣೆ ಮಾಡಿಸಲು ನನಗೆ ತೊಂದರೆ ಇದೆ ಯಾಕೆಂದರೆ ಅವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ.

ನಿಡಿ-3 ನನ್ನ ದೊಡ್ಡಪ್ಪ ನನಗೆ ಕೊಟ್ಟಿರುತ್ತಾರೆ. ಕೊರಮಪ್ಪನ ಹೆಂಡತಿ ಕರಿಯಮ್ಮ ನಿಡಿ-3 ಯಾವತ್ತೂ ಬರೆದುಕೊಟ್ಟಿಲ್ಲ ಅನ್ನುವುದು ಸುಳ್ಳು. ಸದರಿ ಕರಿಯಮ್ಮ ಯಾವತ್ತೂ 1 ನೇ ಪ್ರತಿವಾದಿ ಈರಪ್ಪನ ಸಂಪರ್ಕದಲ್ಲಿ ಇರಲಿಲ್ಲ ಅನ್ನುವುದು ಸರಿಯಲ್ಲ. ಕೊರಮಪ್ಪ ತನ್ನ ಹೆಂಡತಿ

ಕರಿಯಮ್ಮನಿಗೆ ನಿಡಿ-3 ರಂತೆ ಮರಣ ಶಾಸನ ಮಾಡಿಕೊಡಲು ಹಕ್ಕು ಕೊಟ್ಟಿರಲಿಲ್ಲ ಅನ್ನುವುದು ಸುಳ್ಳು. ವಾದಿಯರಿಗೆ ನಿಪಿ-2 ಮೂಲ ಪುರುಷ ಕೊರಮಪ್ಪ ಬರೆದುಕೊಟ್ಟ ನಂತರ ಆತನ ಹೆಂಡತಿ ಪುನಃ ಅದೇ ಆಸ್ತಿಗಳು ವೀರಪ್ಪನಿಗೆ ಬರೆದುಕೊಡಲು ಅವಕಾಶವೇ ಇರಲಿಲ್ಲ ಅನ್ನುವುದು ಸುಳ್ಳು. 2 ನೇ ಐಟಂ ಆಸ್ತಿಯು ಕರಿಯಮ್ಮ ನಿಡಿ-3 ರಲ್ಲಿ 1 ನೇ ಪ್ರತಿವಾದಿಗೆ ಬರೆದುಕೊಟ್ಟಿಲ್ಲ ಈಗಲೂ ಆ ಆಸ್ತಿಯು ವಾದಿಯರ ಮತ್ತು 1 ರಿಂದ 13 ನೇ ಪ್ರತಿವಾದಿಯ ಜಂಟಿ ಸ್ವಾಧೀನದಲ್ಲಿ ಇದೆ ಇನ್ನುವುದು ಸುಳ್ಳು. 1 ನೇ ಪ್ರತಿವಾದಿ ವೀರಪ್ಪ ವೃತ್ತಿಯಿಂದ ಶಿಕ್ಷಕನಾಗಿದ್ದ ಅನ್ನುವುದು ನಿಜ. ಆದರೆ ತನ್ನ ವಿದ್ಯಾಭ್ಯಾಸದ ಲಾಭ ಪಡೆದು ಕರಿಯಮ್ಮ ನಿಡಿ-3 ಕ್ಕೆ ಹೆಬ್ಬಿಟ್ಟಿನ ಗುರುತು ಹಾಕದಿದ್ದರೂ ಸಹ ಅದನ್ನು ಸೃಷ್ಟಿ ಮಾಡಿದ್ದಾರೆ ಅನ್ನುವುದು ಸುಳ್ಳು. ನಿಡಿ-3 ರಲ್ಲಿ ಕರಿಯಮ್ಮ ಎಂದು ಇರುವ ಹೆಬ್ಬೆಟ್ಟಿನ ಗುರುತುಗಳನ್ನು ಆಕೆ ಮಾಡಿಲ್ಲ ಅನ್ನುವುದು ಸುಳ್ಳು. ಈಗ ನನಗೆ ತೋರಿಸುತ್ತಿರುವ ಹೆಬ್ಬೆಟ್ಟಿನ ಗುರುತುಗಳು ಕರಿಯಮ್ಮಗೆ ಸೇರಿದ್ದಲ್ಲ ಅನ್ನುವುದು ಸುಳ್ಳು. ಕರಿಯಮ್ಮ ತನ್ನ ಕೊನೆ ಉಸಿರಿರುವವರೆಗೂ ಪಲ್ಲೆಕ್ಕಪ್ಪನ ಜೊತೆ ವಾಸವಿದ್ದಳು ಮತ್ತು ಯಾವತ್ತೂ ವೀರಪ್ಪನ ಸಂಪರ್ಕದಲ್ಲಿ ಇರಲಿಲ್ಲ ಅನ್ನುವುದು ಸುಳ್ಳು.

ಕರಿಯಮ್ಮನ ಗಂಡ ಕೊರಮಪ್ಪನ ಅಣ್ಣ ಈರಪ್ಪನ ಮಗ ಪಲ್ಲೆಕಪ್ಪ ಅಂದರೆ ನಿಜ. ನಾವು ಎಲ್ಲಾ ಪ್ರತಿವಾದಿಯರು ಗೊಲ್ಲಳ್ಳಿ ಈರಜ್ಜನ 2 ನೇ ಹೆಂಡತಿ ಲಕ್ಕಮ್ಮನ ಮಕ್ಕಳು ಎಂದರೆ ಸಾಕ್ಷಿ ಗೊಲ್ಲಳ್ಳಿ ಈರಜ್ಜನಿಗೆ ಕೇವಲ ಒಬ್ಬಳೇ ಹೆಂಡತಿ ಇದ್ದಳು ಎಂದು ಹೇಳುತ್ತಾರೆ. ನಿಡಿ-3 ಕರಿಯಮ್ಮ ಯಾವತ್ತೂ ವೀರಪ್ಪನಿಗೆ ಬರೆದುಕೊಟ್ಟಿಲ್ಲ ಬದಲಾಗಿ ನಾವು ಅದನ್ನು ಸೃಷ್ಟಿ ಮಾಡಿದ್ದೇವೆ ಅನ್ನುವುದು ಸುಳ್ಳು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.